# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೆಂಟ್/ಉಪಲೋಕ್/ಬಿಡಿ/2593/2021**
**ಪಿಓ/ಎ.ಆರ್.ಇ-2 (ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:31/03/2022.
04-04-22

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

<u>ವಿಷಯ:</u> ಸರ್ಕಾರಿ ನೌಕರರಾದ **ಶ್ರೀ. ಕೆ.ವಿ. ಜಗದೀಶ, ಬಿನ್ ವೆಂಕಟೇಶ @ ವೆಂಕಟೇಶಪ್ಪ, (ಹೊರಗುತ್ತಿಗೆ ನೌಕರ), ಟೆಲಿಮೆಡಿಸಿನ್, ಡಾಟಾ ಎಂಟ್ರಿ ಆಪರೇಟರ್, ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, (ಎಸ್.ಎನ್.ಆರ್.) ಕೋಲಾರ, ಕೋಲಾರ ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೋಲಾರ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಕೆ.ವಿ. ಜಗದೀಶ, ಬಿನ್ ವೆಂಕಟೇಶ @ ವೆಂಕಟೇಶಪ್ಪ, (ಹೊರಗುತ್ತಿಗೆ ನೌಕರ), ಟೆಲಿಮೆಡಿಸಿನ್, ಡಾಟಾ ಎಂಟ್ರಿ ಆಪರೇಟರ್, ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, (ಎಸ್.ಎನ್.ಆರ್.) ಕೋಲಾರ, ಕೋಲಾರ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀಮತಿ. ಶೈಲಜ ಎಂ. ಕೋಂ ರಾಮಮೂರ್ತಿ, ನಿರ್ವಾಹಕರು, ಬಿ.ಎಂ.ಟಿ.ಸಿ. ಘಟಕ-39, ಹೊಸಕೋಟೆ, ವಾಸ: ಹೊಲೇರ ಹಳ್ಳಿ ಗ್ರಾಮ, ವೇಮಗಲ್ ಹೋಬಳಿ, ಕೋಲಾರ ತಾ: ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಕೋಲಾರ ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ **ಸಂ: 12/2018** ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರು ಬಿ.ಎಂ.ಟಿ.ಸಿ. ಘಟಕ-39, ಹೊಸಕೋಟೆಯಲ್ಲಿ ನಿರ್ವಾಹಕಿಯಾಗಿ ಕೆಲಸ ನಿರ್ವಹಿಸುತ್ತಿದ್ದು, ಅವರ ಸ್ವಂತ ಅಕ್ಕನಿಗೆ ಎರಡೂ ಕಿಡ್ನಿ ವೈಫಲ್ಯವಾಗಿದ್ದು,

ದೂರುದಾರರು ತಮ್ಮ ಒಂದು ಕಿಡ್ನಿಯನ್ನು ಸ್ವ-ಇಚ್ಛೆಯಿಂದ ದಾನ ಮಾಡಿದ್ದರಿಂದ ವೈದ್ಯರು ಅವರಿಗೆ ಕಷ್ಟದಾಯಕ ಕೆಲಸಗಳನ್ನು ನಿರ್ವಹಿಸದಂತೆ ಸೂಚಿಸಿರುವುದರಿಂದ ನಿರ್ವಾಹಕಿ ಕೆಲಸ ಮಾಡಲು ಸಾಧ್ಯವಾಗದ ಕಾರಣ ವೃಂದ ಬದಲಾವಣೆ ಮಾಡಿಸಿಕೊಳ್ಳುವ ಸಲುವಾಗಿ ಎದುರುದಾರರು ಕೆಲಸ ಮಾಡುತ್ತಿರುವ ಕೋಲಾರ ನಗರದಲ್ಲಿರುವ ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆಯ ಮುಖ್ಯಸ್ಥರಿಗೆ ವೈದ್ಯಕೀಯ ಪ್ರಮಾಣ ಪತ್ರ ನೀಡಲು ಕೋರಿ ದಿನಾಂಕ:23/07/2018ರಂದು ಸಂಬಂಧಿಸಿದ ವೈದ್ಯಕೀಯ ದಾಖಲಾತಿಗಳೊಂದಿಗೆ ಮನವಿಯನ್ನು ಸಲ್ಲಿಸಿದ್ದು, ಅದೇ ದಿನ ದೂರುದಾರರ ಅಣ್ಣನಾದ ವೆಂಕಟೇಶಪ್ಪ ರವರು ಎದುರುದಾರರವರನ್ನು ಭೇಟಿಮಾಡಿ ವೈದ್ಯಕೀಯ ಪ್ರಮಾಣ ಪತ್ರದ ಬಗ್ಗೆ ವಿಚಾರಿಸಲಾಗಿ, ಎದುರುದಾರರು 'ಬುಧವಾರ ಪ್ರಮಾಣ ಪತ್ರ ನೀಡುವ ಕಮಿಟಿಯ ಮೀಟಿಂಗ್ ಇದ್ದು, ಈ ಕಮಿಟಿಯಿಂದ ದೂರುದಾರರಿಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಮಾಡಿಸಿಕೊಡುತ್ತೇನೆ, ತನಗೆ 15 ಸಾವಿರ ರೂ.ಗಳನ್ನು ಕೊಡು' ಎಂದು ಹೇಳಿದಾಗ, ವೆಂಕಟೇಶಪ್ಪರವರು ನಮ್ಮ ಹತ್ತಿರ ಅಷ್ಟು ಹಣ ಇಲ್ಲವೆಂದು ಹೇಳಿದ್ದಕ್ಕೆ ಎದುರುದಾರರು ಫೈನಲ್ ಆಗಿ 12 ಸಾವಿರ ರೂ. ಗಳು ಕೊಟ್ಟರೆ ಮಾಡಿಸಿಕೊಡುತೇನೆ ಎಂದು ಹೇಳಿ ಅವರ ಮೊಬೈಲ್ ನಂಬರ್‌ನ್ನು ದೂರುದಾರರ ಅಣ್ಣನಾದ ವೆಂಕಟೇಶಪ್ಪರವರಿಗೆ ನೀಡಿದ್ದು, ಅವರು ಸದರಿ ವಿಚಾರವನ್ನು ದೂರುದಾರರಿಗೆ ತಿಳಿಸಿ, ನಂತರ ನೀನೇ ಹೋಗಿ ಎದುರುದಾರರನ್ನು ರಿಕ್ವೆಸ್ಟ್ ಮಾಡಿಕೊಂಡು ವೈದ್ಯಕೀಯ ಪ್ರಮಾಣ ಪತ್ರವನ್ನು ತೆಗೆದುಕೊ ಎಂದು ತಿಳಿಸಿರುತ್ತಾರೆ. ದೂರುದಾರರು ದಿನಾಂಕ: 24/07/2018 ರಂದು ಸಂಜೆ ಅವರ ಮೊಬೈಲ್ ನಂ.8747950592ನೇದ್ದರಿಂದ ಎದುರುದಾರರ ಮೊಬೈಲ್ ನಂ.9986600882ನೇದ್ದಕ್ಕೆ ಕರೆ ಮಾಡಿ ಕೇಳಲಾಗಿ ಎದುರುದಾರರು "ನಿನ್ನ ಅಣ್ಣನಿಗೆ ಹೇಳಿದ್ದೇನೆ, 12 ಸಾವಿರ ರೂ. ಗಳನ್ನು ತೆಗೆದುಕೊಂಡು ಬನ್ನಿ" ಎಂದು ತಿಳಿಸಿರುತ್ತಾರೆ. ಆಗ ದೂರುದಾರರು "ನಮ್ಮಲ್ಲಿ ಅಷ್ಟು ಹಣ ಇಲ್ಲ, ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ಕೇಳಿಕೊಂಡಾಗ, ಎದುರುದಾರರು ಇಲ್ಲ ನಿಮ್ಮ ಅಣ್ಣನ ಬಳಿ ಎಲ್ಲಾ ಮಾತನಾಡಿದ್ದೇನೆ" ಎಂದು ಹೇಳಿರುತ್ತಾರೆ. ಈ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii. ದಿನಾಂಕ: 25/07/2018ರಂದು ಬೆಳಿಗ್ಗೆ 10-10 ಗಂಟೆಗೆ ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದುದರಿಂದ, ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಕೋಲಾರ ಎಸಿಬಿ ಪೋಲಿಸ್ ಠಾಣೆ ಮೊ. ಸಂ. **12/2018** ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (ತಿದ್ದು ಪಡಿ)ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ, ತನಿಖಾಧಿಕಾರಿಗಳು ಅದೇ ದಿನ ಅಂದರೆ 25/07/2018 ರಂದು ಸರ್ಕಾರಿ ಪಂಚರುಗಳಾದ 1) ಶ್ರೀಮತಿ. ಹೆಚ್.ಎಂ. ತಾರಕೇಶ್ವರಿ, (ನೆರಳು ಸಾಕ್ಷಿ) 2) ಶ್ರೀ. ಪುರುಷೋತ್ತಮ, ಅವರುಗಳನ್ನು

ಬರಮಾಡಿಕೊಂಡು, ಅವರುಗಳ ಪರಿಚಯವನ್ನು ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ, ದೂರಿನ ಪ್ರತಿಯನ್ನು ಪಂಚರುಗಳಿಗೆ ಕೊಟ್ಟು ಅದನ್ನು ತನಿಖಾಧಿಕಾರಿಗಳು ಓದಿ ಅದರಲ್ಲಿಯ ವಿಷಯವನ್ನು ತಿಳಿದುಕೊಂಡು ಮತ್ತು ಅದರಲ್ಲಿನ ವಿಷಯ ನಿಜವೆಂದು ದೂರುದಾರರಿಂದ ಖಚಿತಪಡಿಸಿಕೊಂಡರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪಂಚರ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಅದನ್ನು ಪ್ಲೇ ಮಾಡಿ ಪಂಚರುಗಳಿಗೆ ಕೇಳಿಸಿರುತ್ತಾರೆ. ನಂತರ ಯು.ಎಸ್.ಬಿ. ಡಾಟಾ ಕೇಬಲ್ ಮೂಲಕ ಲ್ಯಾಪ್ ಟಾಪ್‌ಗೆ ಕನೆಕ್ಟ್ ಮಾಡಿ, ನಂತರ ಅದರಲ್ಲಿನ ಸಂಬಾಷಣೆಯನ್ನು ಸಿಡಿಗಳಿಗೆ ವರ್ಗಾಯಿಸಿರುತ್ತಾರೆ ಹಾಗೂ ಸಂಭಾಷಣೆಯನ್ನು ಲಿಪಿಕರಣ ಮಾಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಅದರಲ್ಲಿ ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡುಬರುತ್ತದೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಲಂಚ ನೀಡಲು ತಂದ (ರೂ.2,000/- ಮುಖಬೆಲೆಯ 06-ನೋಟುಗಳು) ಒಟ್ಟು 12,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚ-2ರವರು ಸದರಿ ನೋಟುಗಳನ್ನು ಎಣಿಸಿ, ಅವುಗಳ ನಂ.ನ್ನು ಮತ್ತು ಮೌಲ್ಯವನ್ನು ಪರಿಶೀಲಿಸಿ ಹೇಳಿದಂತೆ, ಪಂಚ-1ರವರು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ.

iv. ನಂತರ ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಎರಡೂ ಬದಿಗಳಿಗೆ ಸವರಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚಸಾಕ್ಷಿ-2 ರವರು ದೂರುದಾರರ ಅಂಗ ಶೋಧನೆ ಮಾಡಿದ ಮೇಲೆ, ಪಂಚ-1ರವರು ಸದರಿ ಫಿನಾಫ್ತಲೀನ್ ಪೌಡರನ್ನು ಸವರಿದ ಹಣವನ್ನು ಎಣಿಸಿ, ಸದರಿ ಹಣವನ್ನು ದೂರುದಾರರ ಹ್ಯಾಂಡ್ ಪರ್ಸ್‌ನಲ್ಲಿ ಬೇರೆ ಯಾವುದೇ ರೀತಿಯ ವಸ್ತುಗಳು ಇಲ್ಲದಿರುವ ಬಗ್ಗೆ ಖಚಿತಪಡಿಸಿಕೊಂಡು ಫಿನಾಫ್ತಲೀನ್ ಪೌಡರನ್ನು ಸವರಿದ ಹಣವನ್ನು ಇಟ್ಟಿರುತ್ತಾರೆ. ನಂತರ ಪಂಚ ಸಾಕ್ಷಿ-2 ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ, ಬೇರೆ ಯಾವುದೇ ಸ್ಥಳದಲ್ಲಿ ಇಡದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ತನ್ನ ಬಲಗೈಯಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ನೆರಳು ಸಾಕ್ಷಿಯಾದ ಪಂಚ-1 ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ತನಿಖಾಧಿಕಾರಿಗಳು ಎಲ್ಲಾ ಸಿಬ್ಬಂದಿ, ದೂರುದಾರರಿಗೆ ಹಾಗೂ

ಪಂಚರಿಗೆ ಸೋಪಿನಿಂದ ಕೈತೊಳೆಯಲು ಸೂಚಿಸಿದ್ದು, ಅದರಂತೆ ಅವರೆಲ್ಲರೂ ಸೋಪಿನಿಂದ ಕೈತೊಳೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟಿದ್ದು, ಅದನ್ನು ಎದುರುದಾರರನ್ನು ಬೇಟಿಯಾದಾಗ ಅನ್ ಮಾಡಿಕೊಂಡು ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೊಟೋಗಳನ್ನು ತೆಗೆಯಿಸಿ, ದಿನಾಂಕ: 25/07/2018ರಂದು ಬೆಳಿಗ್ಗೆ 11–00 ಗಂಟೆಯಿಂದ 12–30 ಗಂಟೆಯವರೆಗೆ ಕೋಲಾರ ಎಸಿಬಿ ಕಚೇರಿಯಲ್ಲಿ ಲ್ಯಾಪ್ ಟಾಪ್ ಮೂಲಕ ತನಿಖಾಧಿಕಾರಿಗಳು ಪ್ರಾಯೋಗಿಕ ಪಂಚನಾಮೆಯನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತಾರೆ.

v. ಅದೇ ದಿನ ಅಂದರೆ ದಿನಾಂಕ: 25/07/2018ರಂದು ಮಧ್ಯಾಹ್ನ 12–35 ಗಂಟೆಗೆ ಇಲಾಖಾ ವಾಹನದಲ್ಲಿ ದಾಳಿ ತಂಡದವರು ಕೋಲಾರ ಎಸಿಬಿ ಕಚೇರಿಯನ್ನು ಬಿಟ್ಟು ಕೋಲಾರ ಎಸ್.ಎನ್.ಆರ್. ಆಸ್ಪತ್ರೆಯ ಆವರಣದಲ್ಲಿ ಯಾರಿಗೂ ಅನುಮಾನ ಬರದಂತೆ ನಿಲ್ಲಿಸಿ ದೂರುದಾರರು ಮತ್ತು ಪಂಚ–1–ನೆರಳು ಸಾಕ್ಷಿಯನ್ನು ವಾಹನದಿಂದ ಇಳಿಸಿ, ಅವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ, ಎದುರುದಾರರನ್ನು ಭೇಟಿ ಮಾಡಿ ಮಾತನಾಡಿದ್ದನ್ನು ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಲು ತಿಳಿಸಿ, ಸದರಿ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿಕೊಂಡು, ಎದುರುದಾರರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿರುತ್ತಾರೆ. ನಂತರ ದೂರುದಾರರು ಹಾಗೂ ನೆರಳು ಸಾಕ್ಷಿಯವರು ಎದುರುದಾರರ ಕಚೇರಿಯ ಕೊಠಡಿ ನಂ.79ರ ಒಳಗೆ ಹೋದಾಗ, ಎದುರುದಾರರು ಕಚೇರಿಯಲ್ಲಿ ಕುಳಿತಿದ್ದು, ಅವರನ್ನು ವೈದ್ಯಕೀಯ ಪ್ರಮಾಣ ಪತ್ರದ ಬಗ್ಗೆ ವಿಚಾರಿಸಲಾಗಿ, ಎದುರುದಾರರು ದೂರುದಾರರ ಬಳಿ ಸ್ವಲ್ಪ ಹೊತ್ತು ಮಾತನಾಡಿ ನಂತರ ಲಂಚದ ಹಣವನ್ನು ನೀಡುವಂತೆ ಕೇಳಿದಾಗ, ದೂರುದಾರರು ಫಿನಾಫ್ತಲೀನ್ ಪೌಡರ್ ಲೇಪಿತ ಲಂಚದ ಹಣವನ್ನು ನೀಡಿದಾಗ, ಎದುರುದಾರರು ತನ್ನ ಬಲಗೈಯಲ್ಲಿ ಲಂಚದ ಹಣವನ್ನು ಪಡೆದು ಎರಡೂ ಕೈಗಳಿಂದ ಎಣಿಸಿಕೊಂಡು ತನ್ನ ಶರ್ಟಿನ ಎಡಜೇಬಿನಲ್ಲಿಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಹೊರಗಡೆ ಬಂದು ಟ್ರಾಪ್ ಸಿಬ್ಬಂದಿಗೆ ಕಾಣುವಂತೆ ತನ್ನ ತಲೆಯನ್ನು ಸವರಿಕೊಳ್ಳುವ ಮೂಲಕ ಸೂಚನೆ ನೀಡಿರುತ್ತಾರೆ.

vi. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ಸದರಿ ಎದುರುದಾರರಿದ್ದ ಸ್ಥಳಕ್ಕೆ ಬರುತ್ತಿದ್ದಾಗ, ಕೊಠಡಿ ನಂ.79ರಿಂದ ಹೊರಗಡೆ ಒಬ್ಬ ವ್ಯಕ್ತಿಯು ಬಂದು ಪ್ಯಾಸೇಜ್‌ನಲ್ಲಿ ಹೋಗುತ್ತಿದ್ದಾಗ, ದೂರುದಾರರು ಅವರನ್ನು ತೋರಿಸಿ ಇವರೇ ತನ್ನಿಂದ ವೈದ್ಯಕೀಯ ಪ್ರಮಾಣ ಪತ್ರ ಮಾಡಿಸಿಕೊಡಲು ರೂ.12,000/–ಗಳ ಲಂಚದ ಹಣವನ್ನು ಪಡೆದುಕೊಂಡು ತಾನು ಧರಿಸಿದ್ದ ಶರ್ಟಿನ ಎಡಭಾಗದ

ಜೇಬಿನಲ್ಲಿರಿಸಿಕೊಂಡಿರುತ್ತಾರೆ ಎಂದು ತೋರಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಎದುರುದಾರರ ಬಳಿ ಬಂದು ತಮ್ಮ ಗುರುತಿನ ಚೀಟಿ ತೋರಿಸಿ, ತಮ್ಮ ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ, ಆಗ ಸಮಯ 1-00 ಗಂಟೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರನ್ನು ಅದೇ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ಘುಟನೆಯ ಕಾಲಕ್ಕೆ ನಡೆದ ವಿದ್ಯಾಮಾನಗಳ ಬಗ್ಗೆ ದೂರುದಾರರಿಗೆ ಮತ್ತು ನೆರಳು ಸಾಕ್ಷಿ ಪಂಚ-1ರವರನ್ನು ವಿಚಾರಿಸಿ ತಿಳಿದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾದ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ಲಂಚದ ಹಣವನ್ನು ಹಾಜರುಪಡಿಸಲು ಸೂಚಿಸಿದಾಗ, ಅವರು ತಮ್ಮ ಶರ್ಟಿನ ಎಡಭಾಗದ ಜೇಬಿನಲ್ಲಿರಿಸಿಕೊಂಡಿರುತ್ತಾರೆ ಎಂದು ತಿಳಿಸಿದಾಗ, ತನಿಖಾಧಿಕಾರಿಗಳ ಸೂಚನೆಯಂತೆ ಸದರಿ ಹಣವನ್ನು ಪಂಚ-1ರವರಿಂದ ತೆಗೆಯಿಸಿದ್ದು, ಪಂಚ-1ರವರು ಸದರಿ ಹಣವನ್ನು ಪರಿಶೀಲಿಸಿದಾಗ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಸದರಿ ಲಂಚದ ಹಣದ ಬಗ್ಗೆ ಎದುರುದಾರರಲ್ಲಿ ವಿಚಾರಿಸಿದಾಗ, ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ. ನಂತರ ತನಿಖಾಧಿಕಾರಿಗಳು ಸದರಿ ಹಣವನ್ನು ಒಂದು ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಬದಲೀ ಶರ್ಟಿನ ವ್ಯವಸ್ಥೆ ಮಾಡಿ, ಲಂಚದ ಹಣ ಇಟ್ಟುಕೊಂಡಿದ್ದ ಶರ್ಟಿನ ಜೇಬನ್ನು ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಸದರಿ ಶರ್ಟನ್ನು ತಮ್ಮ ವಶಕ್ಕೆ ತೆಗೆದುಕೊಂಡು ಸೀಲ್ ಮಾಡಿರುತ್ತಾರೆ.

vii. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ನಾನು ಹೊರಗುತ್ತಿಗೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಾಧಾರಣ ಗಣಕಯಂತ್ರ ನಿರ್ವಾಹಕನಾಗಿ ಕಳೆದ ಐದು ವರ್ಷಗಳಿಂದ ಯಾವುದೇ ರೀತಿಯ ದೂರುಗಳಿಲ್ಲದೆ ಕೆಲಸ ನಿರ್ವಹಿಸುತ್ತಿದ್ದು, ಈ ಎರಡು ದಿನಗಳಿಂದ ಶೈಲಜ ರವರು ಪ್ರಮಾಣ ಪತ್ರ ಇಂಗ್ಲೀಷ್‌ನಲ್ಲಿ ಟೈಪ್ ಮಾಡಲು ತಿಳಿಸಿದರು. ಇದರಂತೆ ಅವರ ಆಸ್ಪತ್ರೆಯ ದಾಖಲಾತಿಗಳ ಪ್ರಕಾರ ಟೈಪ್ ಮಾಡುವಾಗ ಬಲವಂತದಿಂದ ನನಗೆ ಹಣ ನೀಡಲು ಬಂದರು. ನಾನು ಬೇಡ ಬೇಡ ಎಂದು ಸುಮಾರು ಬಾರಿ ಹೇಳಿದರು, ಬಲವಂತದಿಂದ ನನ್ನ ಜೇಬಿಗೆ ಇಟ್ಟರು.

ಇದರಿಂದ ನಾನು ಕೈಯಿಂದ ಮುಟ್ಟಿ ಅವರಿಗೆ ಹಿಂದಿರುಗಿಸಲು ನೀಡಿದೆ. ಅವರು ಪಡೆದಿಲ್ಲ. ಇದನ್ನು ನನ್ನ ಗಣಕಯಂತ್ರ ಕೊಠಡಿಯಲ್ಲಿದ್ದ ರೋಗಿಗಳಾದ ನಾಗೇಶ್, ಬಂಗಾರಪೇಟೆ ಹಾಗೂ ಅಣ್ಣಯ್ಯ ಬಿನ್ ಸೊಣ್ಣೇಗೌಡ ನಲ್ಲೂರು, ಬೇತಮಂಗಲ, ಕೋಲಾರ ಇವರುಗಳು ಅಲ್ಲಿಯೇ ಇದ್ದರು. ಅವರು ಸಹಾ ಇದನ್ನು ನೋಡಿರುತ್ತಾರೆ. ಹಾಗೂ ನಾನು ಐದು ವರ್ಷಗಳಿಂದ ಯಾವುದೇ ರೀತಿಯ ದೂರುಗಳು ಇಲ್ಲ. ನಾನು ನಿರಪರಾಧಿಯಾಗಿದ್ದು ನನಗೆ ನ್ಯಾಯ ನೀಡಬೇಕಾಗಿ ಕೇಳುತ್ತಾ ನಾನು ಕೇವಲ 10,000/-ಗಳ ತಿಂಗಳ ಕೂಲಿಗಾಗಿ ಕೆಲಸ ನಿರ್ವಹಿಸುತ್ತಿದ್ದು, ಇದು ನನ್ನ ಮೇಲೆ ಯಾರೋ ಪಿತೂರಿಯಿಂದ ಮಾಡಿರುವ ಕೆಲಸ. ದಯವಿಟ್ಟು ನಿಮ್ಮಲ್ಲಿ ಮನವಿ ಮಾಡುವುದೇನೆಂದರೆ, ನಿರಪರಾಧಿಯಾದ ನನಗೆ ನ್ಯಾಯ ನೀಡಬೇಕಾಗಿ ತಮ್ಮಲ್ಲಿ ಮನವಿ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ.

viii. ನಂತರ ತನಿಖಾಧಿಕಾರಿಗಳು ದೂರುದಾರರನ್ನು ಹಾಗೂ ಪಂಚ-1ರವರಿಗೆ ಎದುರುದಾರರ ಸಮಜಾಯಿಷಿಯ ಬಗ್ಗೆ ಕೇಳಿದಾಗ, ಅವರು ಎದುರುದಾರರ ಸಮಜಾಯಿಷಿಯನ್ನು ನಿರಾಕರಿಸಿ, ದೂರುದಾರರಿಗೆ ಸಂಬಂಧಪಟ್ಟ ವೈದ್ಯಕೀಯ ಪ್ರಮಾಣ ಪತ್ರ ಮಾಡಿಸಿಕೊಡಲು ಲಂಚಕ್ಕೆ ಬೇಡಿಕೆ ಇಟ್ಟು, ದೂರುದಾರರಿಂದ 12,000/- ರೂ.ಗಳ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂದಪಟ್ಟ ಕಡತವನ್ನು ಹಾಜರುಪಡಿಸಲು ತಿಳಿಸಿದಾಗ, ಎದುರುದಾರರು ಕಡತವನ್ನು ಹಾಜರುಪಡಿಸಿದ್ದು, ಅದರಲ್ಲಿನ ಕೆಲವು ದಾಖಲಾತಿಗಳನ್ನು ಜೆರಾಕ್ಸ್ ಮಾಡಿಸಿ, ಎದುರುದಾರರ ಮೇಲಾಧಿಕಾರಿಯಾದ ಜಿಲ್ಲಾ ಶಸ್ತ್ರ ಚಿಕಿತ್ಸಕರನ್ನು ಸಂಪರ್ಕಿಸಲಾಗಿ, ಸದರಿಯವರು ಸರ್ಕಾರಿ ಕೆಲಸ ನಿಮಿತ್ತ ಸದರಿಯವರು ಕೇಂದ್ರ ಸ್ಥಾನದಲ್ಲಿ ಇರದ ಕಾರಣ, ಶ್ರೀ. ಡಾ: ನಾರಾಯಣ ಸ್ವಾಮಿ, ಎಸ್.ವಿ. ನಿವಾಸಿ ವೈದ್ಯಾಧಿಕಾರಿಗಳು, ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, (ಎಸ್.ಎನ್.ಆರ್.) ಕೋಲಾರ, ರವರ ಮೂಲಕ ಧೃಢೀಕರಿಸಿಕೊಂಡು ಅಮಾನತ್ತು ಪಡಿಸಿಕೊಂಡಿರುತ್ತಾರೆ.

ix. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಲಂಚದ ಹಣ ಕೊಡಲು ಹೋದಾಗ ಮೊಬೈಲ್‌ನಲ್ಲಿ ರೆಕಾರ್ಡ್ ಆದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಮೂಲಕ ಹಾಕಿ ಪ್ಲೇ ಮಾಡಿ ನೋಡಿದಾಗ, ತಾಂತ್ರಿಕ ಕಾರಣಗಳಿಂದಾಗಿ ರೆಕಾರ್ಡ್ ಆಗಿರುವುದಿಲ್ಲ. ತದನಂತರ ಪಂಚರುಗಳ ಸಮಕ್ಷಮ ಎದುರುದಾರರು ದಿನಾಂಕ:25/07/2018ರಂದು ಮಧ್ಯಾಹ್ನ 12-40 ಗಂಟೆಯ ಸುಮಾರಿಗೆ ದೂರುದಾರರು ಅವರ ಕಚೇರಿಗೆ ಹೋದಾಗ ಮಾತನಾಡಿದ ಸಂಭಾಷಣೆಯನ್ನು, ಮಾದರಿ ಧ್ವನಿಗಾಗಿ ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಹಾಗೂ ದೂರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಸಿಡಿಗಳನ್ನು ತಯಾರಿಸಿರುತ್ತಾರೆ ಹಾಗೂ ಎದುರುದಾರರ ಧ್ವನಿಯನ್ನು ಅವರ

ಮೇಲಾಧಿಕಾರಿಯಾದ ಶ್ರೀ. ಡಾ: ನಾರಾಯಣ ಸ್ವಾಮಿ, ಎಸ್.ವಿ. ನಿವಾಸಿ ವೈದ್ಯಾಧಿಕಾರಿಗಳು, ಎಸ್.ಎನ್.ಆರ್. ಆಸ್ಪತ್ರೆ, ಕೋಲಾರ, ರವರಿಗೆ ಕೇಳಿಸಿದಾಗ ಅದರಲ್ಲಿನ ಗಂಡಸಿನ ಧ್ವನಿಯು ಎದುರುದಾರರದ್ದು ಅಂತ ಗುರುತಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು, ದೂರುದಾರರ ಹಾಗೂ ಎದುರುದಾರರುಗಳ ಮಾದರಿ ಧ್ವನಿಗಳನ್ನು ಪಡೆದು ಸಿಡಿಗಳಿಗೆ ವರ್ಗಾಯಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರನ್ನು ಅದೇ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ. ಮೇಲ್ಕಂಡ ಟ್ರಾಪ್ ಮಹಜರ್‌ಗೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿನಾಂಕ: 25/07/2018ರಂದು ಕೋಲಾರ ನಗರದ ಶ್ರೀ ನರಸಿಂಹರಾಜ (ಎಸ್.ಎನ್.ಆರ್.) ಜಿಲ್ಲಾ ಆಸ್ಪತ್ರೆ ಯಲ್ಲಿರುವ ಟೆಲಿ ಮೆಡಿಸನ್ ಸೆಂಟರ್ ಮತ್ತು ಕಂಪ್ಯೂಟರ್ ಸರ್ವರ್‌ನ ಕೊಠಡಿ ನಂ.79ರಲ್ಲಿ ಮಧ್ಯಾಹ್ನ 01–00 ಗಂಟೆಯಿಂದ ಸಂಜೆ 05–30 ಗಂಟೆಯವರೆಗೆ ಲ್ಯಾಪ್ ಟಾಪ್‌ನಲ್ಲಿ ಟ್ರಾಪ್ ಮಹಜರ್‌ನ್ನು ತನಿಖಾಧಿಕಾರಿಗಳು ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತಾರೆ.

x. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ಕಂಡುಬರುತ್ತದೆ. ಎದುರುದಾರರ ಎರಡೂ ಕೈಗಳನ್ನು ತೊಳೆಯಿಸಿದ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಹಾಗೂ ಎದುರುದಾರರ ಶರ್ಟಿನ ಜೇಬನ್ನು ತೊಳೆಯಿಸಿದ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ, ಫಿನಾಪ್ತೀಲೀನ್ ಅಂಶವು ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ಧೃಢಪಟ್ಟಿರುತ್ತದೆ. ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಎದುರುದಾರರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

xi. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 03/12/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆಗಳಲ್ಲಿಯ ಆಪಾದನೆಗಳನ್ನು ಸಂಪೂರ್ಣವಾಗಿ ನಿರಾಕರಿಸಿ ಆ ಎಲ್ಲಾ ಅಂಶಗಳು ಪ್ರಕರಣಕ್ಕಾಗಿ ಸೃಷ್ಠಿಸಿದವುಗಳಾಗಿರುತ್ತವೆ, ದೂರುದಾರ ಮತ್ತು ತನಿಖಾಧಿಕಾರಿಗಳ ಹೇಳಿಕೆ ಮತ್ತು ಸಾಕ್ಷಾಂಶಗಳು ನಂಬಲರ್ಹವಾಗಿರುವದಿಲ್ಲ ಮತ್ತು ತಾನು ಕೃತ್ಯ ಎಸಗಿರುತ್ತೇನೆ ಎಂಬುದನ್ನು ನಿರೂಪಿಸುವುದಿಲ್ಲ. ಧ್ವನಿ ಸಂಭಾಷಣೆಗಳನ್ನು ಕೇಸಿಗಾಗಿ ಸೃಷ್ಠಿಸಲಾಗಿದೆ. ತಾನು ಸರ್ಕಾರಿ ನೌಕರನಿಗೆ ತರವಲ್ಲದ ಭ್ರಷ್ಟಾಚಾರದ ವರ್ತನೆಯನ್ನು ಪ್ರದರ್ಶಿಸಿರುವುದಿಲ್ಲ, ಕಾರಣ ಇಲಾಖಾ ವಿಚಾರಣೆಯ ಪ್ರಸ್ತಾವನೆಯನ್ನು ಕೈಬಿಟ್ಟು ತನಗೆ ನ್ಯಾಯದಾನ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ."

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಈ ಪ್ರಕರಣದಲ್ಲಿನ ಎದುರುದಾರರು ಹೊರಗುತ್ತಿಗೆ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ವ.ನಿ.ಸೇ) ನಿಯಮಗಳು ಅನ್ವಯಿಸುವುದಿಲ್ಲ. ಆದರೆ ಎದುರುದಾರರು, ದುರ್ನಡತೆ ಎಸಗಿರುವುದು ತನಿಖೆಯಿಂದ ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಎದುರುದಾರರ ವಿರುದ್ಧ ಕಾನೂನು ರೀತ್ಯ

ಸೂಕ್ತ ಕ್ರಮ ಕೈಗೊಳ್ಳಲು, ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

04/04/22

**(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)**
**ಉಪಲೋಕಾಯುಕ್ತರು-2**
**ಕರ್ನಾಟಕ ರಾಜ್ಯ, ಬೆಂಗಳೂರು.**